

ಕೆನರಾ ಬ್ಯಾಂಕ್ ಬೆಂಗಳೂರಿನಲ್ಲಿ ಸೋಮವಾರ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಸುರೇಖಾ ಬೋರ್ಕರ್ ಅವರು 'ಕನ್ನಿಕಾ' ಮಹಿಳಾ ವೆಬ್‌ಸೈಟ್ ಬಿಡುಗಡೆ ಮಾಡಿದರು. ಬಿಎಸ್‌ಎನ್‌ಎಲ್ ಪ್ರಧಾನ ವ್ಯವಸ್ಥಾಪಕ ವಿ. ಶ್ರೀನಿವಾಸನ್, ಮೈಥಿಲಿ ಕೃಷ್ಣಮೂರ್ತಿ ಮತ್ತಿತರರು ಉಪಸ್ಥಿತರಿದ್ದರು.

# ಎರಡು ವರ್ಷಗಳಲ್ಲಿ 200 ಮಿಲಿಯನ್ ಮೊಬೈಲ್ ಗ್ರಾಹಕರು

ಬೆಂಗಳೂರು, ಡಿ. 13: ಮುಂದಿನ ಎರಡು ವರ್ಷಗಳಲ್ಲಿ ದೇಶದಲ್ಲಿ ಕನಿಷ್ಠ 200 ಮಿಲಿಯನ್ ಮೊಬೈಲ್ ಫೋನ್ ಉಪಕರಣಗಳು ಸೇವಾ ವ್ಯಾಪ್ತಿಗೆ ಒಡಪಡಲಿವೆ ಎಂದು ಬಿಎಸ್‌ಎನ್‌ಎಲ್ ವಾಣಿಜ್ಯ ವಿಭಾಗದ ಪ್ರಧಾನ ವ್ಯವಸ್ಥಾಪಕ ವಿ. ಶ್ರೀನಿವಾಸನ್ ಇಂದು ಇಲ್ಲಿ ಹೇಳಿದರು.

ಕೆನರಾ ಬ್ಯಾಂಕ್‌ನ ಮಹಿಳಾ ಉದ್ಯಮ ಅಭಿವೃದ್ಧಿ ಕೇಂದ್ರವು ಪಲ್ಸ್‌ಟೋನ್ ಇಂಡಸ್ಟ್ರೀಸ್ ಸಹಯೋಗದಲ್ಲಿ ಮಹಿಳೆಯರಿಗಾಗಿ ನಗರದಲ್ಲಿ ಏರ್ಪಡಿಸಿದ್ದ 'ಮೊಬೈಲ್ ಮತ್ತು ಇತರೆ ವಿದ್ಯುನ್ಮಾನ ಉಪಕರಣಗಳ ಸೇವಾ ನಿರ್ವಹಣೆ' ಕುರಿತ ತರಬೇತಿ ಕಾರ್ಯಕ್ರಮ ಉದ್ಘಾಟನೆ ಹಾಗೂ ಮಹಿಳಾ ಉದ್ಯಮಿಗಳಿಗಾಗಿ ಸಿದ್ಧಪಡಿಸಲಾಗಿರುವ 'ಕನ್ನಿಕಾ' www.cannika.org ವೆಬ್‌ಸೈಟ್ ಬಿಡುಗಡೆ ಸಂದರ್ಭದಲ್ಲಿ ಅವರು ಮಾತನಾಡಿದರು.

ಪ್ರಸ್ತುತ ದೇಶದಲ್ಲಿ 100 ಮಿಲಿಯನ್ ಮೊಬೈಲ್ ಫೋನ್ ಉಪಕರಣಗಳು ಸೇವಾ ವ್ಯಾಪ್ತಿಗೆ ಒಳಪಟ್ಟಿವೆ ಎಂದು ತಿಳಿಸಿದರು.

ದೂರಸಂಪರ್ಕ ಸೇವೆಯಲ್ಲಿ ಇಂದು ಕ್ರಾಂತಿ ಉಂಟಾಗಿದೆ. ಸ್ಪರ್ಧಾತ್ಮಕ ಯುಗಕ್ಕೆ ಇದು ಅನಿವಾರ್ಯವಾಗಿದ್ದು, ಜನತೆ ಕೂಡ ಇಂತಹ ವಿಶೇಷ ತಾಂತ್ರಿಕ ಅಭಿವೃದ್ಧಿಯನ್ನೇ ಬಯಸಿರುವುದರಿಂದ ಹೆಚ್ಚಿನ ಅನುಕೂಲತೆ ಆಗಿದೆ ಎಂದರು.

ದೇಶದಲ್ಲಿ ಸರಕಾರ ನೋಕಿಯಾಗಳಂತಹ ಅನೇಕ ಕಂಪೆನಿಗಳಿಗೆ ಹೆಚ್ಚಿನ ಮೊಬೈಲ್ ಫೋನ್ ಉಪಕರಣಗಳ ಉತ್ಪಾದನೆಗೆ ಪರವಾನಗಿ ನೀಡಿರುವುದರಿಂದ ಉದ್ಯೋಗಾವಕಾಶ ಕೂಡ ಹೆಚ್ಚಾಗಿದೆ ಎಂದು ಹೇಳಿದರು.

ಇಂದು ದೇಶವೇ ಒಂದು ಮಾರುಕಟ್ಟೆಯಾಗಿದ್ದು, ಈ ಹಿನ್ನೆಲೆಯಲ್ಲಿ ಕೆನರಾ ಬ್ಯಾಂಕ್‌ನ ಈ ಕೇಂದ್ರವು ಆರಂಭಿಸಿರುವ ತರಬೇತಿ ಕಾರ್ಯಕ್ರಮ ಹೆಚ್ಚಿನ ಸಾಧನೆಗೆ ಅವಕಾಶ ಕಲ್ಪಿಸಲಿದ್ದು, ದೂರಸಂಪರ್ಕ ಸೇವೆಯನ್ನು ಮತ್ತಷ್ಟು ಅಭಿವೃದ್ಧಿಪಡಿಸಲು ಸಹಕಾರಿಯಾಗಲಿದೆ ಎಂದರು.

ಸುರೇಖಾ ಬೋರ್ಕರ್ ಕಾರ್ಯಕ್ರಮ ಉದ್ಘಾಟಿಸಿ, ವೆಬ್‌ಸೈಟ್ ಬಿಡುಗಡೆ ಮಾಡಿದರು. ಈ ವೆಬ್‌ಸೈಟ್ ವಿವಿಧ ಮಹಿಳಾ ಉದ್ಯಮ ಮತ್ತು ಸಂಸ್ಥೆಗಳ ಮಾಹಿತಿ, ಮಹಿಳಾ ಉದ್ಯಮಿಗಳ ಸೇವೆ ಮುಂತಾದ ಮಾಹಿತಿಗಳನ್ನು ಒದಗಿಸಲಿದೆ.

ಕೆನರಾ ಬ್ಯಾಂಕ್‌ನ ಪ್ರಧಾನ ವ್ಯವಸ್ಥಾಪಕ ಕೆ. ವೆಂಕಟರಾಮಯ್ಯ, ಉಪ ಪ್ರಧಾನ ವ್ಯವಸ್ಥಾಪಕ ಜಿ.ಕೆ. ಭಟ್, ಸಹ ಪ್ರಧಾನ ವ್ಯವಸ್ಥಾಪಕರಾದ ಮೈಥಿಲಿ ಕೃಷ್ಣಮೂರ್ತಿ, ವಿ.ಬಿ. ಶೆಣೈ, ಪಲ್ಸ್‌ಟೋನ್ ಇಂಡಸ್ಟ್ರೀಸ್ ಲಿ. ನಿರ್ದೇಶಕ ಸ್ವಾಮಿನಾಥನ್, ಬ್ಯಾಂಕ್‌ನ ವ್ಯವಸ್ಥಾಪಕಿ ಚಂದ್ರಿಕಾ ಮತ್ತಿತರರು ಉಪಸ್ಥಿತರಿದ್ದರು.